ಓಎಸ್ ನಂ. 58/2016
ಡಿ ಡಬ್ಲ್ಯೂ-2

<u>ದಿನಾಂಕಃ **19.06.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀಸವಾಲುಃ ವಾದಿ ಪರ ವಕೀಲರಿಂದಃ</u>

ನಾನು ಪ್ರತಿವಾದಿಯ ಸಂಬಂಧಿಕನು ಎಂದರೆ ಸರಿ. ನಾನು ಹಿಸ್ಸೆ ಪತ್ರಕ್ಕೆ ಸಹಿ ಮಾಡಿದ್ದೇನೆ ಹಾಗೂ ಅದು 1989 ರಲ್ಲಿ ಆಗಿರುತ್ತದೆ. ನಾನು ಹಿಸ್ಸೆ ಪತ್ರಕ್ಕೆ ಸಹಿ ಮಾಡುವ ಕಾಲಕ್ಕೆ ದಾಖಲೆಗಳನ್ನು ನೋಡಿದ್ದೆ. ಸಾಮಾನ್ಯವಾಗಿ ಹಿಸ್ಸೆ ಮಾಡಿಕೊಳ್ಳುವುದುವು ಎಂದರೆ ನಮ್ಮ ಸ್ವಂತ ಆಸ್ತಿಗಳನ್ನು ಮಾತ್ರ ಹಿಸ್ಸೆ ಮಾಡಿಕೊಳ್ಳುತ್ತೇವೆ ಎಂದರೆ ಸರಿ. ಸಾಮಾನ್ಯವಾಗಿ ಹಿಸ್ಸೆ ಮಾಡಿಕೊಳ್ಳುವ ಕಾಲಕ್ಕೆ ಆ ಆಸ್ತಿಗಳ ಖಾತೆ ಆ ವ್ಯಕ್ತಿಯ ಮಾಲೀಕತ್ವದಲ್ಲಿ ಇದ್ದರೆ ಮಾತ್ರ ಹಿಸ್ಸೆ ಮಾಡಿಕೊಳ್ಳುತ್ತಾರೆ ಎಂದರೆ ಸರಿ.

ಸರ್ವೆ ನಂ. 116, ನಿಡಿ-1 ನ್ನು ಬರೆಯುವ ಕಾಲಕ್ಕೆ ಯಾರ ಹೆಸರಿನಲ್ಲಿ ಆ ಸ್ವತ್ತು ಇತ್ತು ಎಂದು ಪರಿಶೀಲನೆ ಮಾಡಿಲ್ಲ. ಸರ್ವೆ ನಂ. 116, ನಿಡಿ-1 ನ್ನು ಬರೆಯುವ ಕಾಲಕ್ಕೆ ಸದರಿ ಸ್ವತ್ತು ವಾದಿಯ ಹಾಗೂ ಪ್ರತಿವಾದಿಯರ ಸ್ವತ್ತು ಅಲ್ಲ, ಅದು ಬೇರೆಯವರ ಸ್ವತ್ತು ಎಂದರೆ ಸರಿ. ಸದರಿ ಸರ್ವೆ ನಂಬರನ್ನು ಈರಪ್ಪ ಬಿನ್ ಪ್ರಭಪ್ಪರವರು ಕ್ರಯಕ್ಕೆ ಪಡೆದ ಸ್ವತ್ತು ಎಂದರೆ ಸರಿ. ಆ ಕಾರಣ ಸದರಿ ಸರ್ವೆ ನಂ. 116 ಕ್ಕೆ ಸಂಬಂಧಿಸಿದಂತೆ ಖಾತೆ ಬದಲಾವಣೆ ನಿಡಿ-2 ರ ಪ್ರಕಾರ ರದ್ದಾಯಿತು ಎಂದರೆ ಸರಿ. ಈರಪ್ಪರವರೆ ನಿಡಿ-1 ನ್ನು ಬರೆಯುವ ದಿನದವರೆಗೆ ಸರ್ವೆ ನಂ. 116 ನ್ನು ಉಳುಮೆ ಮಾಡುತ್ತಿದ್ದರು ಎಂದರೆ ಸರಿ. ತದನಂತರ ವಾದಿಯು, ದಿನಾಂಕಃ 10.12.1980 ರಂದು ಕ್ರಯಕ್ಕೆ ಕೊಂಡರು ಎಂದರೆ ಸಾಕ್ಷಿಯು ಮೊದಲೇ ಆಗಿತ್ತು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು 10.12.1980 ರಂದೆ, ಸರ್ವೆ ನಂ. 116, ಸ್ವಾಧೀನಾನುಭವಕ್ಕೆ ವಾದಿಗೆ ಬಿಟ್ಟುಕೊಟ್ಟಿದ್ದರು ಎಂದು ನುಡಿಯುತ್ತಾರೆ.

ನಾನು ನನ್ನ ಪರವಾಗಿ ನ್ಯಾಯಾಲಯಕ್ಕೆ ಸಲ್ಲಿಸಿದ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ. ನಿಡಿ-1 ನ್ನು ಬರೆಯುವ ಕಾಲಕ್ಕೆ ಬೇರೆಯವರ ಆಸ್ತಿಯನ್ನು ಒಳಗೊಂಡ ದಾಖಲೆಯನ್ನು ಬರೆದಿರುತ್ತದೆ ಎಂದರೆ ಸಾಕ್ಷಿಯು ಅವರ ಆಸ್ತಿ ಎಂದು ನುಡಿಯುತ್ತಾರೆ. ಖಾತೆ ಮತ್ತು ಪಹಣಿ ಸರ್ವೆ ನಂ.116 ಕ್ಕೆ ವಾದಿಯ ಹೆಸರು ನಮೂದು ಎಂದರೆ ಸರಿ. ದಿನಾಂಕಃ 10.12.1980 ರ ಕ್ರಯ

ಪತ್ರವನ್ನು ಹೊರತು ಪಡಿಸಿ ಇನ್ನಾವುದೇ ಕ್ರಯ ಪತ್ರ ಆಗಿಲ್ಲ ಎಂದರೆ ಸರಿ. ಸರ್ವೆ ನಂ. 116 ಕ್ಕೆ ಸಂಬಂಧಿಸಿದಂತೆ ನಿಡಿ-1 ನ್ನು ಹೊರತುಪಡಿಸಿ ಬೇರೆ ಯಾವುದೇ ಹಿಸ್ಸೆ ಪತ್ರ ಆಗಿಲ್ಲ ಎಂದರೆ ಸರಿ.

ವಾದಿಯು, ಸ್ವತ್ತು 116, ವಿಸ್ತೀರ್ಣ 2 ಎಕರೆ 12 ಗುಂಟೆ ನನ್ನದು ಎಂದು ನ್ಯಾಯಾಲಯಕ್ಕೆ ದಾವೆ ಸಲ್ಲಿಸಿದ್ದಾರೆ. ಪ್ರತಿವಾದಿ 2 ಮತ್ತು 3 ವಾದಿಗೆ ಸಹೋದರರಾಗಬೇಕು. ದಾವಾ ಸ್ವತ್ತು ವಾದಿಯ ಸ್ವಾಧಿನಾನುಭವದಲ್ಲಿ ಇದೆ, ಪ್ರತಿವಾದಿಯರ ಸ್ವಾಧೀನಾನುಭದಲ್ಲಿ ಇಲ್ಲ ಎಂದರೆ ಸರಿ. ಸರ್ವೆ ನಂ. 116 ರಲ್ಲಿ, ಮೂವತ್ತು ಗುಂಟೆ ತಲಾ ಪ್ರತಿವಾದಿ 2 ಮತ್ತು 3 ಉಳುಮೆ ಮಾಡುತ್ತಿದ್ದಾರೆ ಹಾಗೂ ಉಳಿದ ಜಮೀನನ್ನು ವಾದಿಯು ಉಳುಮೆ ಮಾಡುತ್ತಿದ್ದಾರೆ. ಅದೇ ರೀತಿಯಾಗಿ ಪ್ರತಿವಾದಿ 2 ಮತ್ತು 3 ರವರು ಉಳುಮೆ ಮಾಡುತ್ತಿದ್ದಾಗಿ ಪಹಣಿ ಮತ್ತು ಖಾತೆ ಪತ್ರ ಇದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಕಂಪ್ಯೂಟರೀಕರಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಾಕ್ಷಿಯ ಸಹಿ

(ಶಾರದಾ ಕೊಪ್ಪದ)
ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.,
ಸೊರಬ.